ಮಾನ್ಯ ಅಧ್ಯಕ್ಷರೆ, ಆಗ ನಾವು ಚರ್ಚೆಯಲ್ಲಿಭಾಗವಹಿಸಲಿಲ್ಲ, ತಮ್ಮ ಮನಸ್ಸನ್ನು ಒಲಿಸಿಕೊಳ್ಳಬೇಕು, ಇದಕ್ಕೆ ತೀವ್ರವಾದ ವಿರೋಧ ಇದೆ, ಇದಕ್ಕೆ ನಮ್ಮಿಂದ ವಿರೋಧ ಇದೆ, ನಿಮ್ಮಿಂದ ವಿರೋಧವಿಲ್ಲ. ನಾವು ಮಾತನಾಡುವಾಗ ಅವರು ಆ ರೀತಿ ಅಡ್ಡಿಪಡಿಸಿದರೆ ಹೇಗೆ, ನಿಮಗೆ ಕೇಳಿಸಬೇಕಲ್ಲ. ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳಿಸಬೇಕು, ಮಂತ್ರಿಗಳೇ ಎದ್ದು ನಿಂತು ಗಲಾಟೆ ಮಾಡಿದರೆ ಹೇಗೆ? ಈ ಸರ್ಕಾರದ ಈ ಪಂಚಾಯತ್ ರಾಜ್ ಮಸೂದೆಗೆ ವಿಧಾನ ಪರಿಷತ್ತಿನಲ್ಲಿ ಮುಖಭಂಗವಾಗಿದೆ. ಅದನ್ನು ಅಲ್ಲಿ ತಿರಸ್ಕಾರ ಮಾಡಿದ್ದಾರೆ.

ಅಧ್ಯಕ್ಷರು : ಅದರ ಬಗ್ಗೆ ಹೇಳಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮುಖಭಂಗವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಏನು ಮುಖಭಂಗ, ಮುಖಭಂಗವಾಗಿರುವುದು ನಿಮಗೆ.

ಅಧ್ಯಕ್ಷರು : ಸಿಂಧ್ಯಾರವರೆ, ಸಂಬಂಧಪಟ್ಟ ಮಂತ್ರಿಗಳಾದ ಮಾನ್ಯ ಫೋರ್ಪಡೆಯವರು ಮಾತನಾಡುತ್ತಾರೆ.

ಶ್ರೀ ಪಿ.ಜಿ.ಆರ್ .ಸಿಂಧ್ಯ: ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಮನಸ್ಸಿನಲ್ಲಿರತಕ್ಕದ್ದು ನನಗೆ ಗೊತ್ತು. ಗ್ರಾಮೀಣಾಭಿವೃದ್ಧಿ ಸಚಿವರಿಗೆ ಹಾಗೂ ಮುಂದಿನ ಸಾಲಿನಲ್ಲಿ ಕುಳಿತ ಅನೇಕ ಮಂತ್ರಿಗಳಿಗೆ ಮನಸ್ಸಿಲ್ಲ. ಮಾನ್ಯ ಬನ್ನಿಕೋಡ್‌ರವರು ಮೊನ್ನೆತಾನೆ ಕಾಂಗ್ರೆಸ್ ಪಕ್ಷಕ್ಕೆ ಹೋಗಿದ್ದಾರೆ

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್ : ಇವರು ಅವಕಾಶವನ್ನು ಕಳೆದುಕೊಂಡಿದ್ದಾರೆ. ಮತ್ತೆ ಇದರ ಬಗ್ಗೆ ಮಾತನಾಡುವುದಕ್ಕೆ ಅವರಿಗೆ ನೈತಿಕವಾದ ಹಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರೆ, ತಾವು ಕುಳಿತುಕೊಳ್ಳಿ ನಾನು ಫೈನಲ್ಲಾಗಿ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ , ತಾವು ಹೇಳಬೇಕು, ಈ ಸರ್ಕಾರಕ್ಕೆ ಹಠಮಾರಿತನ ಇದೆ. ಇದರಿಂದಾಗಿ ಇವರಿಗೆ ತೊಂದರೆಯಾಗುತ್ತಿದೆ, ಏಕೆ ಇವರು ಚರ್ಚೆಗೆ ಅವಕಾಶವನ್ನು ಕೊಡುತ್ತಿಲ್ಲವೆಂದರೆ: ವಿಧಾನ ಪರಿಷತ್ತಿನ ಮುಂದೆ ಬಿಲ್ ಹೋಗುತ್ತದೆ. ಅಷ್ಟರೊಳಗಡೆ ಪಾಸ್ ಆಯಿತು ಎಂದು ಹೇಳಿ, ಇವರಿಗೆ ಆಮೆಗಾತ್ರದ ಬಹುಮತ ಇದೆ ಎಂದು ತೋರಿಸಿಕೊಳ್ಳುವುದಕ್ಕೆ ಮಾಡುತ್ತಿರುವುದು, ಇದು ನಾಚಿಕೆಗೇಡಿತನದ ವಿಚಾರವೆಂದು ನಾನು ಹೇಳುತ್ತೇನೆ. ಇವರಿಗೆ ಬಹುಮತ ಇದೆ ಎನ್ನತಕ್ಕಂಥದ್ದು ಗೊತ್ತಿದೆ ಏನಾದರೂ ಮಾಡಿಕೊಳ್ಳಿ ಎಂದು ಹೇಳಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಬೇಕು. ಕರ್ನಾಟಕ ರಾಜ್ಯದವರು ನಾವು ಇಡೀ ದೇಶದಲ್ಲಿ ಮಾದರಿಯಾಗಿದ್ದೇವೆ. ಆಡಳಿತ ಪಕ್ಷದ ಧೋರಣೆಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗವನ್ನು ಮಾಡುತ್ತೇವೆ.

(ಸಂಯುಕ್ತ ಜನತಾದಳ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದನದಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಸಿಗುತ್ತಿಲ್ಲ. ಈ ರೀತಿ ಪ್ರತಿಭಟನೆಯನ್ನು ನಾವು ಮಾಡುತ್ತಿದ್ದೇವೆ. ನಾವು ಮಾತನಾಡುವಾಗ ಅಧ್ಯಕ್ಷರಾದ ನೀವು ನಮ್ಮ ರಕ್ಷಣೆಗೆ ಬರಬೇಕು. ಈ ರೀತಿಯಾದ ಮನೋಭಾವನೆ ಸರಿಯಾದುದಲ್ಲ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಈ ರೀತಿಯಾಗಿ ಗಲಾಟೆಯನ್ನು ಮಾಡಬಾರದು. 5 ನಿಮಿಷದಲ್ಲಿ ಬಿಲ್ ಪಾಸಾಗುತ್ತದೆ ತಡೆಯಿರಿ. ಪಾಯಿಂಟ್ ಆಫ್ ಆರ್ಡರ ರೈಜ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಅರಗಜ್ಞಾನೇಂದ್ರ : ಇದು ಸತ್ ಸಂಪ್ರದಾಯವಲ್ಲ, ತಾವು ರೂಲಿಂಗ್ ಕೊಟ್ಟರೆ ಆಯಿತು.

ಶ್ರೀ .ಯು.ಆರ್. ಸಭಾಪತಿ : ಈ ಸದನ ನಿಯಮಾವಳಿಗಳಿಗೆ ಅನುಗುಣವಾಗಿ ನಡೆಯ ಬೇಕು ಎನ್ನುವ ದೃಷ್ಟಿಯಿಂದ ಈ ರೂಲ್ಸ್ ಪುಸ್ತಕವನ್ನು ಮಾಡಿದ್ದು ಇರುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ಚರ್ಚೆ ಮಾಡಲಿಕ್ಕೆ ಅವಕಾಶ ಇದೆಯೋ ಇಲ್ಲವೋ ಎನ್ನುವುದನ್ನು ಮಾನ್ಯ ಅಧ್ಯಕ್ಷರು ನಮಗೆ ಹೇಳಬೇಕು. ತಾವು ಆಗಲೇ ಹೇಳಿದ ಹಾಗೆ ನಮ್ಮ ರಕ್ಷಣೆಗೆ ನೀವು ಬರಬೇಕು. ಅರ್ಧ ಗಂಟೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೀರಿ.

MR.SPEAKER : Can you not wait for five minutes? ವಿರೋಧ ಪಕ್ಷದವರು ಹೋದ ಸಲ ತಮಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳುತ್ತಿದ್ದರು ದಯಮಾಡಿ ಸುಮ್ಮನೆ ಇರಬೇಕು. ಅರ್ಧಗಂಟೆಯ ಕಾಲಾವಕಾಶವನ್ನು ಮಾತನಾಡಲು ಕೋಡೋಣ, ನಾನು ಒಂದು ಗಂಟೆಗೆ ಸರಿಯಾಗಿ ವೋಟಿಂಗ್‌ಗೆ ಹಾಕುತ್ತೇನೆ : ಪಾಸಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ರಾಜ್ಯಾಂಗದ 64ನೇ ತಿದ್ದುಪಡಿಯನ್ನು ಇಂತಹ ಕಾರಣಕ್ಕಾಗಿಯೇ ಸಂವಿಧಾನಕ್ಕೆ ತಿದ್ದುಪಡಿತಂದಾಗ, ರಾಜ್ಯಸಭೆಯ ಮೇಲ್ಮನೆಯಲ್ಲಿ ಇದೇ ಜನ ವಿರೋಧ ಮಾಡಿದ್ದರು. ಅಲ್ಲಿ ಆ ಬಿಲ್ ನಪಾಸ್ ಆಯಿತು. ಆದ್ದರಿಂದ ಇವರಿಗೆ ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ವಿಶ್ವಾಸವಿಲ್ಲ. ಮಾನ್ಯ ರಾಜೀವ್ ಗಾಂಧಿಯವರು 73-74ನೇ ತಿದ್ದುಪಡಿಯನ್ನು ತಂದು ವಿಧೇಯಕವನ್ನು ಪಾಸ್ ಮಾಡಬೇಕಾಯಿತು. ಈ ಚರ್ಚೆಯ ಬಗ್ಗೆ ನಿಮಗೆ ವಿಶ್ವಾಸ ಇದ್ದರೆ, ನಾನು ಆ ದಿನ ಬಿಲ್ ಮೂವ್‌ಮಾಡಿದಾಗ ತಮ್ಮಲ್ಲಿ ನಾನು ಬೇಡಿಕೊಂಡೆ, ಈ ಸದನದ ಸಾರ್ವಭೌಮತ್ವವನ್ನು ಮಾನ್ಯ ರಾಜ್ಯಪಾಲರ ಹತ್ತಿರ ತೆಗೆದುಕೊಂಡು ಹೋಗಬೇಡಿ, ಚರ್ಚೆ ಮಾಡಿ ಎಂದು ಹೇಳಿದೆ. ಆಗ ಅವಕಾಶ ಇತ್ತು, ಈಗ ಮತ್ತೆ ಪುನಃ ಇದರ ಬಗ್ಗೆ ಚರ್ಚೆ ಮಾಡಬೇಕೆಂದರೆ ಹೇಗೆ ಇದಕ್ಕೆ ಏನು ಅರ್ಥವಿದೆ ?

(ಗೊಂದಲ)

ಅಧ್ಯಕ್ಷರು : ನಾನು ಮೋಷನ್‌ಮೂವ್ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ) : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ತಾವು ಕೊಡುತ್ತಿರುವ ಅವಕಾಶಕ್ಕೆ ಮಾನ್ಯ ಸದಸ್ಯರು ವಿರೋಧ ಮಾಡುತ್ತಿದ್ದಾರೆ, ತಮಗೆ ಅವರು ಪ್ರಶ್ನೆ ಮಾಡುತ್ತಿದ್ದಾರೆ. ಇದು ಈ ಸದನದ ಗೌರವದ ಪ್ರಶ್ನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : 12 ಗಂಟೆಯಿಂದ ಮಾತನಾಡಿ ಎಂದು ಅಧ್ಯಕ್ಷರು ಹೇಳುತ್ತಿದ್ದಾರೆ ಒಂದು ಗಂಟೆಯವರೆಗೆ ಮಾತನಾಡಿ ಹೇಳಿ ಎಂದರೆ, ನೀವು ಹೇಳಲಿಲ್ಲ. ನಿಮಗೆ ಚರ್ಚೆ ಮಾಡಬೇಕಾಗಿಲ್ಲ. ನಿಮಗೆ ಧರಣಿ ಮಾಡಬೇಕಾಗಿದೆ ಮಾಡಿ.

ಶ್ರೀ ಎಸ್.ಸುರೇಶ್ ಕುಮಾರ್ : ಪಾರ್ಲಿಮೆಂಟರಿ ಸಚಿವರು ಒಂದು ರೀತಿಯಿಂದ, When he himself talks in a way questioning the ruling of the Chair, We have nothing to say.

(ಬಿಜೆಪಿ ಸದಸ್ಯರ ಸಭಾತ್ಯಾಗವನ್ನು ಮಾಡಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ಇದು ವಿಕೇಂದ್ರಿಕೃತ ವ್ಯವಸ್ಥೆಗೆ ತಿದ್ದಿವಿರುದ್ಧವಾಗಿದೆ. ಆದ್ದರಿಂದ ನಾನು ಅಗೌರವ ಮಾಡಲಿಲ್ಲ.

ಅಧ್ಯಕ್ಷರು : ಎಲ್ಲಾ ಮುಗಿದು ಹೋಗಿದೆ, ಮಾನ್ಯ ಬೈರೇಗೌಡರೇ ನಿಮ್ಮ ಪಕ್ಷದವರೆಲ್ಲರೂ ಸಭಾತ್ಯಾಗ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಮ್ಮ ಕಡೆಯವರು ವಾಕ್‌ಔಟ್ ಮಾಡಿರುವುದು ನನಗೆ ಗೊತ್ತಿದೆ. ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ನನಗೆ ಅವಕಾಶವನ್ನು ತಾವು ಕೊಡಬೇಕಾಗುತ್ತದೆ. ಯಾವುದೇ ಮಸೂದೆಯಾಗಲಿ ಅಥವಾ ಪ್ರಸ್ತಾವನೆಯಾಗಲಿ, ಯಾವ ಹಂತದಲ್ಲಿ ಬೇಕಾದರೂ ಕೂಡ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ತಾವು ದಯವಿಟ್ಟು ಈ ಮಸೂದೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ನಿಯಮಾವಳಿಗಳನ್ನು ಮೀರಿ ಈ ಸಭೆಯನ್ನು ನಡೆಸುವುದಕ್ಕೆ ಅವಕಾಶವಿಲ್ಲ. ನಿಯಮಾವಳಿಗಳ ಪ್ರಕಾರ ಚರ್ಚೆಯಲ್ಲಿ ಭಾಗವಹಿಸತಕ್ಕಂಥವರಿಗೆ ತಾವು ಅವಕಾಶವನ್ನು ಮಾಡಿಕೊಡಲೆಬೇಕಾಗುತ್ತದೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗಾಗಲೇ ನಿಮ್ಮ ಕಡೆಯವರೆಲ್ಲಾ ವಾಕ್‌ಔಟ್ ಮಾಡಿದ್ದಾರೆ;

ಶ್ರೀ ಸಿ. ಬೈರೇಗೌಡ : ನೀವು ನನಗೆ ಅವಕಾಶವನ್ನು ಕೊಡದೆ ಇದ್ದರೆ ನಾನು ಸಹ ವಾಕ್‌ಔಟ್ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀ ಸಿ. ಬೈರೇಗೌಡರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಭಾಗವಹಿಸಿರುವ ಪಕ್ಷೇತರ ಅಭ್ಯರ್ಥಿಗಳಾದ ನಮಗೂ ಸಹ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ತಾವು ಅವಕಾಶವನ್ನು ಮಾಡಿಕೊಡದೆ ಇದ್ದರೆ ನಾನು ಸಹ ಸಭಾತ್ಯಾಗ ಮಾಡುತ್ತೇನೆ.

(ಈಹಂತದಲ್ಲಿ ಶ್ರೀ ಕೆ. ಜಯಪ್ರಕಾಶ್ ಹೆಗಡೆ ಹಾಗೂ ಶ್ರೀ ಕೆ.ಎಂ. ಕೃಷ್ಣಮೂರ್ತಿ (ದಳ-ಎಸ್) ರವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''ವಿಧಾನಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ 2000 ಪುನರ್ ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 13 ರವರೆಗೆ

ಅಧ್ಯಕ್ಷರು : ''ಖಂಡ 2 ರಿಂದ 13ರವರೆಗೆ ಎರಡೂ ಸೇರಿದಂತೆ ಈ ವಿಧೇಯ ಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 13 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ.''

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000 ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''ವಿಧಾನಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000 ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸಂಸದೀಯ ವ್ಯವಹಾರಗಳ ಸಚಿವರು ತಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡಿದರೆಂದು ಮಾನ್ಯ ಸದಸ್ಯರೊಬ್ಬರು ಪ್ರಸ್ತಾಪ ಮಾಡಿರುವುದು ಈಗಾಗಲೇ ಕಡತಕ್ಕೆ ಹೋಗಿದೆ. ತಮ್ಮ ರೂಲಿಂಗ್‌ನ್ನು ನಾನು ಪ್ರಶ್ನೆ ಮಾಡಲಿಕ್ಕೆ ಹೋಗಲಿಲ್ಲ, ನಾನು ಏನು ಹೇಳಿದೆ ಎಂದರೆ ಈ ವಿಕೇಂದ್ರಿಕೃತ ವ್ಯವಸ್ಥೆಯ ತತ್ವಕ್ಕೆ ಇವರು ವಿರೋಧಿಯಾಗಿದ್ದಾರೆ ಹಾಗಾಗಿ ರಾಜ್ಯ ಸಭೆಯಲ್ಲಿ ಮಸೂದೆಯನ್ನು ಬೀಳಿಸಿದರು, ಜೊತೆಗೆ ಇವರಿಗೆ ಅವಕಾಶ ಕೊಟ್ಟಾಗ ಅದನ್ನು ಬಳಕೆ ಮಾಡಿಕೊಳ್ಳದೆ ಧರಣಿ ಕುಳಿತರು. ಈಗ ಚರ್ಚೆ ಮಾಡಬೇಕೆಂದು ಕೇಳುತ್ತಿದ್ದಾರೆ, ಇದು ಸರಿಯಾದುದಲ್ಲ ಎಂದು ಹೇಳಿದೆಯಷ್ಟೆ. ತಮ್ಮ ರೂಲಿಂಗ್‌ನ್ನು ಸಂಸದೀಯ ವ್ಯವಹಾರಗಳ ಸಚಿವರು ಪ್ರಶ್ನೆ ಮಾಡಿದರು ಎನ್ನತಕ್ಕಂತಹ ವಿಷಯ ಕಡತಕ್ಕೆ ಹೋಗಿದ್ದರೆ ಅದನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇ) ವಿಧೇಯಕ ಮಂಡನೆ

(ಗಿ)ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ,2000 ಮಂಡನೆ ಅನುಮತಿ ಕೋರಿಕೆ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ 2000 ಸಭೆಯ ಮುಂದೆ ಮಂಡಿಸಲು ತಮ್ಮ ಅಮನುತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ 2000 ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ 2000 ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ . ಅನುಬಂಧ (iv)

(ii) ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 2000 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ 2000 ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ , ''ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ 2000 ಮಂಡಿಸಲು ಅನುಮತಿ ನೀಡುವುದು.''